(ಇಂದು ದಿನಾಂಕ 01-10-2021 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ವಾದಿ ಪರ ಶ್ರೀ ವಿ.ಜಿ.ಎಚ್. ವಕೀಲರಿಂದ–**

ವಾದ ಪತ್ರದಲ್ಲಿ ನಮೂದಿಸಿರುವಂತಹ ವಂಶಾವಳಿ ನಮ್ಮ ಕುಟುಂಬದ್ದಾಗಿದ್ದು, ಅದು ಸರಿ ಇರುತ್ತದೆ. ಅಸಲು ದಾವಾ ಸಂಖ್ಯೆ 97/2012 ರಲ್ಲಿ ನಮ್ಮ ಕುಟುಂಬದ ಹಿಸ್ಸೆಗೆ ¼ ಆಸ್ತಿ ಬರುತ್ತದೆ ಎಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳ ವಿಭಜನೆ ನಮ್ಮ ಕುಟುಂಬದ ಸದಸ್ಯರ ನಡುವೆ ಈವರೆವಿಗೂ ಆಗಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬ್ಧಧಪಟ್ಟಂತಹ ಕಂದಾಯ ದಾಖಲಾತಿಗಳಲ್ಲಿ ಮಾನ್ಯ ಸಹಾಯಕ ಆಯುಕ್ತರು ಮಾಡಿದಂತಹ ಆದೇಶದ ಮೇರೆಗೆ ಕುಟುಂಬದ ಸದಸ್ಯರ ಹೆಸರುಗಳು ನಮೂದು ಆಗಿರುತ್ತದೆ ಎಂದರೆ ಸರಿ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ